ಹಿತ್ತಲ ಪಕ್ಕದ 'ಬಾಂದು' ಕುಶಲಕ್ಕನ ನೋವಿಗೆ ಕಾರಣವಾಗಿತ್ತು. 'ನೆಲಗಟ್ಟು' ಸಣಕೂಸನ ನಿದ್ದೆಗೆಡಿಸಿದರೆ 'ಬಾಂದು' ಕುಶಲಕ್ಕನ ತಲೆ ಹಾಳು ಮಾಡಿತ್ತು. ಇಬ್ಬರೂ ರಾತ್ರಿಯೆಲ್ಲ ನಿದ್ದೆಯಿಲ್ಲದೇ ಕಳೆದ ದಿನಗಳು ಹೆಚ್ಚಾಗುತ್ತ ಬಂತು. ಆ ತುಂಡು ಭೂಮಿ ಕೊಡು ಎಂದು ಕೇಳಬೇಕೆಂದರೆ ಮಾಲ್ಕಿ ಸುಕ್ರು ಬರುತ್ತಲೇ ಇರಲಿಲ್ಲ. ಎರಡೆಕರೆ ಗದ್ದೆಯ ಗೇಣಿ ಕುಡ್ಡನ ದಚ್ಚುವೇ ತೆಗೆದುಕೊಳ್ಳುತ್ತಿದ್ದ.

ಈ ಹಕೀಕತ್ತು ಅರಗಿಸಿಕೊಳ್ಳಲಾಗದ ಮನಸ್ಥಿತಿಗೆ ಸಣಕೂಸ ತಲುಪಿದ್ದ. ಹಿತ್ತಲ ಆಚೆ ನೆಟ್ಟ ತೆಂಗಿನ ಮರ, ಅಡಕೆಯ ಮರಗಳು ಫಲ ಬಿಡುವ ಹಂತಕ್ಕೆ ಬಂದಿದ್ದವು. ಪಕ್ಕದ ಹೂವಿನ ಗಿಡದ ಮೇಲೆ ಹಾಕಿದ ಜೇಡರ ಬಲೆಯಲ್ಲಿ ಎರಡೆರಡು ಜೇಡರ ಹುಳುಗಳು ಬಿದ್ದು ತಪ್ಪಿಸಿಕೊಳ್ಳಲು ಒದ್ದಾಡುವ ದೃಶ್ಯ ಕಂಡು ಸಣಕೂಸ ಒತ್ತಡಕ್ಕೆ ಒಳಗಾಗುತ್ತಿದ್ದ. ಮಾಲ್ಕಿ ಹಣದಲ್ಲಿ ದೊಡ್ಡ 'ಕುಳ' ಎನಿಸಿಕೊಂಡ ಸುಕ್ರು ಅರಣ್ಯ ಇಲಾಖೆಯವರನ್ನು ಬಳಸಿ ಅತಿಕ್ರಮಣದಾರರನ್ನು ಜಾಗದಿಂದ ಎಬ್ಬಿಸಬೇಕೆಂದು ಕಾನೂನು ಬಂದಿದೆ. ನೀವು ಬೇರೆ ಕಡೆ ಹೋಗಿ ಎಂದು ಸಿಬ್ಬಂದಿಯಿಂದ ಹೇಳಿಸಿ ಹೆದರಿಸಿ ಬೆದರಿಸಲು ತೊಡಗಿದ. ಮನೆಯಾಚೆಯ ತುಂಡು ಭೂಮಿ ಹಾಗಿರಲಿ. 'ಕುಶಲೆ ಹಿತ್ತಲು' ಸಿಗದ ಸ್ಥಿತಿಗೆ ತಲುಪಿದ. ಈ ಯೋಚನೆಯಲ್ಲಿಯೇ ಸಣಕೂಸ ಬಡವಾಗುತ್ತ ಬಂದ. ಮಗ ಇಶ್ರಾ ಡಿಗ್ರಿ ಓದುತ್ತಿದ್ದ. ಅವನು ಮುಂದೇನು ಎಂಬ ಭೂತಾಕಾರ ತಾಳುವ ಪ್ರಶ್ನೆಗೆ ಗರಬಡಿದವನಂತೆ ನಿಂತಿದ್ದ. ಆಲು ಕೂಡ ಏನು ಮಾಡಲಾರದ ಅಸಹಾಯಕ ಸ್ಥಿತಿಯಲ್ಲಿದ್ದ. ಇಂತಹ ಸಂದರ್ಭದಲ್ಲಿ ಸಣಕೂಸ ಮತ್ತು ಕುಶಲಕ್ಕನಿಗೆ ಸಮಾಧಾನ ಹೇಳುವವರಾರು?

ಕುಮಟಾದ ಸಕಲಬೇಣದವನು ಆಗಿದ್ದ ಸಣಕೂಸ ಅಲ್ಲಿರುವ ತುಂಡು ಜಮೀನನ್ನು ಅಣ್ಣ ತಮ್ಮಂದಿರು ಸಾಗುವಳಿ ಮಾಡಿಕೊಂಡಿದ್ದಾರೆಂದು ಅಲ್ಲಿಂದ ಬಿಟ್ಟು ಕುಶಲೆಯನ್ನು ಮದುವೆಯಾದ ಮೇಲೆ ಅವಳ ಜೊತೆ ಮಾವನ ಮನೆಯಲ್ಲಿಯೇ ಉಳಿದಿದ್ದ. ಆಲು ಅಂತೂ ಕುಶಲಕ್ಕ, ಸಣಕೂಸನಿಗೆ ಮಗನಂತೆ ಆಗಿಬಿಟ್ಟಿದ್ದ. ಆಲು ಕುಶಲಕ್ಕ ಯಾವಾಗಲೂ ಹಿತ್ತಲು ಎಲ್ಲಿ ಕೈತಪ್ಪುವುದೋ ಎಂಬ ಬೇಜಾರಿನಲ್ಲಿರುವಾಗ 'ನನಗೆ ನೌಕರಿ ಸಿಕ್ಕಿದರೆ ಮಾಲ್ಕಿ ಸುಕ್ರು ಜಮೀನು ನಾನೇ ತಕೊಳ್ತಿ' ಆಗ ಮನೆಯಾಚೆಯ ತುಂಡು ಭೂಮಿ ನಮ್ದೇ ಆಗುತ್ತದೆ. ಈ ಹಿತ್ತಲು ಕೂಡ ಲಗ್ತ ಇರೋದ್ರಿಂದ ಅರಣ್ಯ ಇಲಾಖೆಯ ಅತಿಕ್ರಮಣ ಅಂತ ಸಂಪೂರ್ಣವಾಗಿ ಹೇಳಲು ಬರುವುದಿಲ್ಲ ಎಂಬ ಆಲುವಿನ ಮಾತುಗಳು ಕೇಳಿ ಕುಶಲಕ್ಕನಿಗೆ ಸಮಾಧಾನ ಆಗುತ್ತಿತ್ತು. ಆದರೆ ಕುಡ್ಡನ ದಚ್ಚು ಹೆಂಡ್ತಿ ಮಂಕಾಳಿ ಬಂದ ಮೇಲೆ ಮತ್ತೆ ಎಂತದೋ ಒತ್ತಡಕ್ಕೆ ಒಳಗಾಗುತ್ತಾಳೆ. ಮಂಕಾಳಿಗೆ ಏನು ಬೇಕಾದರೂ ಕುಶಲಕ್ಕನ ಮನೆಗೆ ಬರಬೇಕು. ಕುಶಲಕ್ಕ ಗೇಣಿ ಮಾಡಿ ಬದುಕಿದರೂ ಒಮ್ಮೊಮ್ಮೆ ಮಂಕಾಳಿಗೆ ಉಣ್ಣಲು ಅಕ್ಕಿ ಇಲ್ಲ ಎಂದಾಗ ಐದಾರು ಕೊಳಗ ಕುಚ್ಚಲಕ್ಕಿ ಕೊಟ್ಟದ್ದು ಇದೆ. ಅಷ್ಟಾದರೂ ಮಾಲ್ಕಿ ಸುಕ್ರು ಜೊತೆ ಸೇರಿ ಸಣಕೂಸನನ್ನು ಎಬ್ಬಿಸುವ ಕೊಳಕತನ ಮಾಡುವುದು ಬಿಡುವುದಿಲ್ಲ. ಅದು ಕುಶಲಕ್ಕನಿಗೂ ಗೊತ್ತು.

ಹೀಗಿರುವಾಗ ಒಮ್ಮೆ ಸಂತೆಗುಳಿ ಪೇಟೆಗೆ ಹೋದಾಗ ಸಿಕ್ಕಿದ ಮಾಲ್ಕಿ ಸುಕ್ರುವನ್ನು ಸಣಕೂಸ ಮಾತಾಡಿಸಿಯೇ ಬಿಡುತ್ತಾನೆ. ಸುಕ್ರಣ್ಣ, ಕುಡ್ಡನ ದಚ್ಚು ಜಮೀನು ನೀ ತಕ್ಕಂಡದ್ದು ಬರೇ ಎರಡು ಸಾವಿರ ರೂಪಾಯಿಗೆ. ಹೇಳ್ಕೊಳ್ಳಕೇ ನಮ್ದು ಒಂದೇ ಊರು. ನಿನ್ನಂತಹ ಸಾವಕಾರನಿಗೆ ಈ ಜಮೀನಿನ ದುಪ್ಪಟ್ಟು ಒಳ್ಳೆಯ ಜಮೀನು ತಕ್ಕೊಳ್ಳಬಹುದು. ನೀನು ಆ ಜಮೀನು ಹಂಗೆ



ಇಟ್ಕೋ. ನಾನು ಗೇಣಿ ಮಾಡಿ ಭತ್ತ ಕಳಿಸಿಕೊಡ್ತಿ. ನಂಗೆ ನಿನ್ನ ಜಮೀನಿನ ಲಗ್ತ ಇರುವ ತುಂಡು ಭೂಮಿ ಕೊಡು. ಕುಡ್ಡನದಚ್ಚು ಆ ತುಂಡು ಭೂಮಿ ಕೊಡ್ತಿ ಅಂತ ನನ್ನ ಇಲ್ಲಿಗೆ ಕರ್ಕಬಂದಾಗಿನಿಂದ ಅದರ ಮೇಲೆ ಜೀವನೇ ಇಟ್ಟೆ. ಅದನ್ನು ನಂಗೆ ಕೊಡು. ನಿನ್ನ ಉಪಕಾರದಿಂದ ನಾನು ಬದಿಕಂತಿ. ಒಂದು ಬದಿಗೆ ಮನೆ ಕಟ್ಟಿಕೊಂಡದ್ದು ಫಾರೆಸ್ಟ್ ಪಡ. ಯಾವಾಗ ಎಬ್ಬಿಸ್ತಿರೋ ಗೊತ್ತಿಲ್ಲ. ನೀ ಕೈ ಬಿಟ್ರೆ ನಾ ಬದುಕುವಂಗಿಲ್ಲ. ನನ್ನ ಹೆಂಡ್ತಿ ಸಣ್ಣ ಹಿತ್ಲು ಮಾಡ್ಕಂಡಿದು. ಅಲ್ಲಿ ನಾಲ್ಕು ತೆಂಗಿನಮರ, ಅಡಕೆಮರ ಫಲ ಬಿಡೋ ಹಂತಕ್ಕೆ ಬಂದ್ವಾ. ಈಗ ನಾವು ಎಲ್ಲ ಬಿಟ್ಟು ಹೋಗುವಂಗೂ ಇಲ್ಲ. ನಿನ್ನ ದಮ್ಮಯ್ಯ ಕುಡ್ಡನದಚ್ಚು ಸಂತಿಗ್ ಮಾತಾಡಿ ನಂಗೆ ಕೊಡು. ನಾ ಏನಾರು ಕೊಡ್ತಿ ಅಂದಾಗ, ಮಾಲ್ಕಿ ಸುಕ್ರುಗೆ ಸಣಕೂಸನ ದೈನ್ಯ ಸ್ಥಿತಿ ಅರ್ಥವಾಗಲೇ ಇಲ್ಲ. ಸ್ವಲ್ಪವೂ ಬೇಜಾರು ಮಾಡದೇ ಖಡಾಖಂಡಿತವಾಗಿ ನಿರಾಕರಿಸಿಬಿಟ್ಟ. 'ಮುಂದೆ ನೋಡುವ ನೀನು ಗೇಣಿಗೆ ಮಾಡ್ತೆ ಇರು' ಅಂದಾಗ 'ಗೇಣಿಗೆ ಮಾಡ್ತೆ ಇದ್ದು ಮೂವತ್ತು ವರ್ಷ ಆಯ್ತು. ಈಗ ಕೊಡ್ತಿ ಆಗ ಕೊಡ್ತಿ ಅಂತಿ' ಎಂದು ಸಿಟ್ಟಿನಿಂದ ಕಾಲ ಬುಡದ ಮಣ್ಣನ್ನು ಕೈಯಲ್ಲಿ ಎತ್ತಿ 'ಈ ಮಣ್ಣಿನಾಣೆಗೂ ಆ ತುಂಡು ಭೂಮಿ ನಿಂಗೆ ದಕ್ಕುದಿಲ್ಲ. ನಿಮ್ಮ ಮಕ್ಕಳ ಮರಿಗೂ ದಕ್ಕದೇ ಹೋಗಲಿ' ಎಂದು ಮಣ್ಣನ್ನು ಭೂಮಿಗೆ ಕುಡುಗಿ ಶಾಪ ಹಾಕಿದ. ಈಗ ಹೇಳ್ತಿ ಕೇಳ್ಕ 'ಈ ವರ್ಷದಿಂದ ನಿನ್ನ ಭೂಮಿ ನಾ ಗೇಣಿಗೆ ಸಾಗುವಳಿ ಮಾಡುದಿಲ್ಲ. ನೀನೆ ಬಂದ ಮಾಡ್ಕ. ಇಲ್ದಿದ್ರೆ ಅಲ್ಲಿ ನೆಲಗಟ್ಟು ಹಾಕ್ಸಿಯಲ್ಲ ಅವರಿಗೆ ಬಂದು ಕುಳ್ಳು ನೋಡುವ' ಎಂದು ಅಲ್ಲಿಂದ ನಿಲ್ಲದೇ ಮನೆಗೆ ಬಂದು ಮುಟ್ಟಿದ್ದ. ಚಹಾಕ್ಕೆ ಚಾ ಪುಡಿ ಅವಲಕ್ಕಿ ಸಕ್ಕರೆ ತರಲು ಹೋಗಿದ್ದು ಮರೆತೇ ಹೋಗಿತ್ತು.

ಮರುದಿನದಿಂದ ಸಣಕೂಸ ಕೆಲಸಕ್ಕೆ ಹೋಗಲು ತೊಡಗಿದ್ದ. ಕುಶಲಕ್ಕ ಕೂಡ ಕೆಲಸಕ್ಕೆ ಹೋಗಿ ದುಡಿಯಲು ಶುರು ಮಾಡಿದಳು. ಗೇಣಿ ಮಾಡಿ ಏನು ಪ್ರಯೋಜನವಿಲ್ಲ. ದುಡಿದ ಭತ್ತವೆಲ್ಲ ಒಡೆಯನಿಗೆ ಕೊಡುವುದಾದರೆ ನಮಗೇನು? ನೆಟ್ಟಿಯಾಳು ಗದ್ದೆಕೊಯ್ಲು ಆಳಿನ ದುಡ್ಡು ಕೊಡುವರಾರು? ಏನು ಕೆಲಸ ಮಾಡದೇ ಇಪ್ಪತ್ತು ಚೀಲ ಭತ್ತ ಆರಾಮವಾಗಿ ವರ್ಷಕ್ಕೊಂದು ಸಲ ತುಂಡು ಭೂಮಿ ಸುದ್ದಿ ಹೇಳ್ಕೊಂಡು ತಕ ಹೋತ್ರಾ ಎಂಬ ಸಣಕೂಸನ ಮಾತಿನಲ್ಲಿ ಶೋಷಣೆಯ ಮುಖ ಎದ್ದು ಕಾಣುತ್ತಿತ್ತು. ನಮ್ಮೋರೆ ನಮಗೆ ಮೋಸ ಮಾಡ್ತಿರು ಎಂದು ಎಷ್ಟೋ ಸಲ ಹಿತ್ತಲ ಅಂಗಳದಲ್ಲಿ ಕೂತಾಗ ಹೇಳುತ್ತಲೇ ಇದ್ದ. ಕುಶಲಕ್ಕ ಕೂಡ ಕೆಲಸ ಬೊಗಸೆ ಅಂತ ದಿನ ಹೋಗುತ್ತಿದ್ದರಿಂದ ಬಸಳೆ ಗೆಣಸಿನ ಬಳ್ಳಿಗಳು ಹೂವಿನ ಗಿಡಗಳು ಬಾಡಿದಂತೆ ಕಾಣಿಸಿದವು. ಹಿತ್ತಲು ಕಳೆದುಕೊಳ್ಳುವ ಅವಳ ನೋವು ಅವಕ್ಕೂ ತಟ್ಟಿರಬೇಕು. ಗೆಣಸು ಬೇಯಿಸಿ ಅಂಗಳದಲ್ಲಿ ತಿನ್ನುತ್ತ ಸುದ್ದಿ ಹೇಳುವ, ಅದು ಇದು ಪಂಚೇತ್ಗಿ ಮಾಡುವ ಕಾಲ ಮುಗಿದುಹೋದಂತೆ ಕಾಣುತ್ತಿತ್ತು.

ಒಂದಿನ ಇದ್ದಕ್ಕಿದ್ದಂತೆ ಅರಣ್ಯ ಇಲಾಖೆಯವರು ನೋಟಿಸ್ ಕೊಟ್ಟೆ ಬಿಟ್ಟರು. ಒಂದು ತಿಂಗಳೊಳಗೆ ನೀನು ಜಾಗ ಖಾಲಿ ಮಾಡಬೇಕು. ಇಲ್ಲವಾದರೆ ಪರಿಣಾಮ ಬೇರೆ ಆಗುತ್ತದೆ ಎಂದಾಗ ಸಣಕೂಸ, ಕುಶಲಕ್ಕ ಅವರ ಎದುರು ದೀನರಾಗಿ ಕೈಮುಗಿದು ನಿಂತಿದ್ದರು. ನಾವಿಲ್ಲಿ ಬಂದೇ ನಲವತ್ತು ವರ್ಷ ಆಯ್ತು. ಇಷ್ಟು ವರ್ಷ ಆದ್ಮೇಲೆ ಬಿಟ್ಹೋಗುದು ಹೇಗೆ? ಇದು ಒಂದು ಎಕರೆನೂ ಇಲ್ಲ. ಇಷ್ಟು ವರ್ಷ ಆದ ಮೇಲೆ ಇದು ನಮ್ದೆ ಆಗುವುದಿಲ್ವೆ. ತೆಂಗಿನ ಮರಗಳು ಎಷ್ಟು ಎತ್ತರಕ್ಕೆ ಹೋಗಿ ಫಲ ಬಿಡ್ತಿವಾ. ಇಷ್ಟು ವರ್ಷ ಎಲ್ಲೋಗಿದ್ರಿ. ನೀವು ಹಿಂಗಂದ್ರೆ ನಾವು ಬದುಕುವಂಗೇ ಇಲ್ಲ. ಮುಂದೆ ದಾರೀನೂ ಕಾಣಕಿಲ್ಲ. ಒಂದು ಕುಟುಂಬದ